ಸಿಸಿನಂ. 96/2022

ಪಿಡಬ್ಲ್ಯೂ 2

<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು,</u>

<u>ಕುಮಟಾ.</u>

ಸಿಸಿ ನಂ. 96/2022

ಪಿಡಬ್ಲೂ : 2

| | | |
|---|---|---|
| ಹೆಸರು | : | ಶ್ರೀ ಮಾರುತಿ |
| ತಂದೆಯ ಹೆಸರು | : | ದೇವಪ್ಪ ನಾಯ್ಕ |
| ವಯಸ್ಸು | : | 52 ವರ್ಷ |
| ಉದ್ಯೋಗ | : | ಎ ಎಸ್ ಐ ಕುಮಟಾ ಪೋಲಿಸ್ ಸ್ಟೇಷನ್ |
| ವಾಸ್ತವ್ಯ | : | ಕುಮಟಾ |
| ಸತ್ಯ ಪ್ರತಿಜ್ಞೆಯ ಮೇರೆಗೆ | : | ದಿನಾಂಕ 15-03-2025 ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. |

**<u>ಮುಖ್ಯ ವಿಚಾರಣೆ : ದಂಡ ಪ್ರಕ್ರೀಯೆ ಸಂಹಿತೆ ಕಲಂ 299 ರಡಿಯಲ್ಲಿ ಪಿರ್ಯಾದುದಾರರ ಪರವಾಗಿ:</u> ಅವರ <u>ವಕೀಲರಿಂದ:</u>**

ನಾನು ಕಳೆದ ಮೂರುವರೆ ವರ್ಷಗಳಿಂದ ನಾನು ಕುಮಟಾ ಆರಕ್ಷಕ ಠಾಣೆಯಲ್ಲಿ ಎ ಎಸ್ ಐ ಆಗಿ ಕಾರ್ಯ ನಿರ್ವಹಿಸುತ್ತಿದ್ದೇನೆ .

2. ಈ ಪ್ರಕರಣದಲ್ಲಿ ನ್ಯಾಯಾಲಯದ ಆದೇಶದಂತೆ ದಿಃ 22-07-2023 ರಂದು ಉದ್ಘೋಷಣೆಯನ್ನು ಮಾಡಲು ನಾನು ಆರೋಪಿಯ ಮನೆಗೆ ಪಂಚರೊಂದಿಗೆ ಹೋದಾಗ ಅಲ್ಲಿ ಆರೋಪಿ ಇರಲಿಲ್ಲ . ಅಲ್ಲಿನ ಜನರಿಗೆ ವಿಷಯ ತಿಳಿಸಿ ಉದ್ಘೋಷಣೆಯ ಪ್ರತಿಯನ್ನು ಆರೋಪಿಯ ಮನೆಯ ಜನರಿಗೆ ಕಾಣುವ ರೀತಿಯಲ್ಲಿ ಮನೆಯ ಮುಂದಿನ ಗೋಡೆಗೆ ಅಂಟಿಸಿರುತ್ತೇವೆ . ಈ ವಿಳಾಸ ಆರೋಪಿಯ ತಾಯಿಯ ಮನೆಯಾಗಿತ್ತು . ಅವರ ಮನೆಯಾದ ಕುಮಟಾ ತಾಲೂಕಿನ ಹೆಗಡೆ ಊರಿನ ಗಣಪತಿ ಶೇಟ್ ರವರ ಮನೆಯ ಮಂದಿನ ಗೋಡೆಗೆ ಉದ್ಘೋಷಣೆಯ ಪ್ರತಿಯನ್ನು ಅಂಟಿಸಿರುತ್ತೇನೆ. ಹಾಗೆಯೇ ಅಲ್ಲಿಂದ ನೇರವಾಗಿ ಕುಮಟಾ ಹೆಗಡೆ ಶಾಂತಿಕಾಂಬಾ ದೇವಸ್ಥಾನದ ಎದುರಿಗೆ ಜನರಿಗೆ ಕಾಣುವ ರೀತಿಯಲ್ಲಿ

ಉದ್ಘೋಷಣೆಯ ಪ್ರತಿಯನ್ನು ಅಂಟಿಸಿರುತ್ತೇವೆ . ಹಾಗೆಯೇ ಅಲ್ಲಿಂದ ಹೆಗಡೆ ಗ್ರಾಮ ಪಂಚಾಯತ ಎದರುರಿನ ನೋಟಿಸ್ ಬೋರ್ಡಿಗೆ ಸಾರ್ವಜನಿಕರಿಗೆ ಕಾಣುವ ರೀತಿಯಲ್ಲಿ ಉದ್ಘೋಷಣೆಯ ಪ್ರತಿಯನ್ನು ಅಂಟಿಸಿರುತ್ತೇವೆ. ಈ ಬಗ್ಗೆ ಬೆಳಿಗ್ಗೆ 7-00 ಗಂಟೆಯಿಂದ 11-00 ಗಂಟೆಯವರೆಗೆ ಪಂಚರ ಸಮಕ್ಷಮ ಪಂಚನಾಮೆಯನ್ನು ತಯಾರಿಸಿರುತ್ತೇನೆ. ಈ ಬಗ್ಗೆ ವರದಿಯನ್ನು ಬರೆದು ನಮ್ಮ ಠಾಣೆಗೆ ನೀಡಿರುತ್ತೇವೆ . ಸದರಿ ಪಂಚನಾಮೆಯನ್ನು ಹಾಗೂ ವರದಿಯನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಪಂಚನಾಮೆಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಪಿ -12 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-12(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಪಂಚರ ಸಹಿಗಳನ್ನು ನೋಡಿ ಗುರುತಿಸಿದ್ದು ನಿಪಿ -12(ಬಿ) ಮತ್ತು (ಸಿ) ಎಂದು ಗುರುತಿಸಲಾಯಿತು. ಸದರಿ ವರದಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಪಿ -13 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ -13(ಎ) ಎಂದು ಗುರುತಿಸಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.